ಬಳಿಯಲ್ಲಿ ಅವರಿಲ್ಲವೆಂದು ತಿಳಿದು ಎದ್ದು ಹುಡುಕುತ್ತ ಹೊರಬಂದೆ. ಹಟ್ಟಿಯ ಮೆಟ್ಟಿಲ ಮೇಲೆ ಒಂದು ಅಚ್ಚರಿಯ ನೋಟವಿತ್ತು. ತೀರ ಕೆಳಗಿನ ಮೆಟ್ಟಿಲ ಮೇಲೆ ಅಜ್ಜಿ ಕಾಲುನೀಡಿ ಕುಳಿತಿದ್ದರು. ನೋವಿನಲ್ಲಿ ಬಾತುಕೊಂಡು ಸಿಡಿತವಿದ್ದ ಅವರ ಕಾಲುಗಳಿಗೆ ವೇಲು ಅದೇನೋ ಒಂದು ವಾಸನೆಯ ಎಣ್ಣೆ ಹಚ್ಚಿ ನೀವುತ್ತಿದ್ದ. ವೇದನೆಯೊಂದಿಗೇ ಅಜ್ಜಿ ಆ ಸಾಂತ್ವನದ ಸಹತಾಪದಲ್ಲಿ ಕಣ್ಮುಚ್ಚಿ ಕುಳಿತಿದ್ದರು. ಒಂದು ಭಜನೆಯ ತನ್ಮಯಭಾವ ಅವನ ಮುಖದ ಮೇಲಿತ್ತು. ಈ ವಿದ್ಯಮಾನ ಆ ಮೇಲೆ ವಾರಗಟ್ಟಲೆ ಮುಂದುವರಿದು ಅಜ್ಜಿಯ ನಡಿಗೆಯೂ ನೆಟ್ಟಗಾಗುತ್ತಾ ಬಂದಿತು. ಮತ್ತೆ ಶಬರಿಮಲೆ ಯಾತ್ರೆ ದಿನಗಳು ತೊಡಗಿ, ವೇಲು ಹೊರಟುಹೋದ. ಮತ್ತೆ ಮರಳಿದುದು ಮುಂದಿನ ವರ್ಷವೆ. ಶಾಲೆಯಲ್ಲಿ ಅಪ್ಪನ ಆಫೀಸು ರೂಮಿಗೆ ಮೇಜು, ಕುರ್ಚಿ, ಶೆಲ್ಫುಗಳ ಅವಶ್ಯಕತೆ ಇತ್ತು. ಅವನು ಏನೇ ಮಾಡಿದರೂ ಆ ವಸ್ತುವಿಗೆ ತನ್ನದೇ ಆದ ಒಂದು ನೋಟವಿರುತ್ತಿತ್ತು. ಸಣ್ಣದೊಂದು ಸ್ಟೂಲಾದರೂ ಅದು ತನ್ನ ಚೆಲುವಿನಿಂದ, ನಿಲುವಿನ ಸಮರ್ಪಕ ಸಂತುಲನದಿಂದ ನಿರಂತರ ಉಪಯೋಗವಾಗುತ್ತಿತ್ತು. ಮನೆಯಲ್ಲಿ ಮಾಡಿದ್ದ ಮಂಚದಲ್ಲಿ ಆ ಕಾಲಕ್ಕೆ ವಿಶಿಷ್ಟವೆನಿಸಿದ ಒಂದು ವ್ಯವಸ್ಥೆಯಿತ್ತು. ಮಲಗಲು ಬೇಕಾದಾಗ ಬಿಡಿಸಿಕೊಂಡರೆ, ಆಮೇಲೆ ನಡುವಿನಲ್ಲಿ ಅಳವಡಿಸಿದ ಬೀಜಾಗರಿಗಳಲ್ಲಿ ಅದನ್ನು ಮಡಿಸಿಕೊಂಡು ಕೂಡುವ ಸೋಫಾಸೆಟ್ ಮಾಡಬಹುದಿತ್ತು. ಎರಡೂ ವ್ಯವಸ್ಥೆಯಲ್ಲಿ ಸ್ಪಷ್ಟವಾದೊಂದು ಸಮ್ಮೋಹಕ ಸೊಬಗಿತ್ತು. ಇದನ್ನು ನೋಡುವುದಕ್ಕೆಂದೇ ಮನೆಗೆ ಜನ ಬರುತ್ತಿದ್ದರು.



ಕಷ್ಟಪಟ್ಟು ಮಾಡಿದರೆ ಕೆಲಸ – ಇಷ್ಟಪಟ್ಟು ಮಾಡಿದರೆ ಆನಂದ. ಅವನಿದ್ದಾಗ ಅಪಾರವಾಗಿ ಆಕಾರವಿಲ್ಲದ ಆನಂದಗಳು ನಮಗೆಲ್ಲ ಬಂದೊದಗುತ್ತಿದ್ದವು. ನಿಷ್ಕಾಮ ಕರ್ಮದ ತಳಹದಿಯಲ್ಲಿ ನಿಷ್ಕಾಮ ಸ್ನೇಹದ ಹಾಸೊಂದಿತ್ತು. ಅವ್ಯಕ್ತ ಸತ್ಯವಾಗಿತ್ತು. ಒಂದೇ ಒಂದು ಅಸಂಗತವೆಂದರೆ ರಾತ್ರಿ ಅವನು ತನ್ನ ರೂಮಿನೊಳಗೆ ಹೋದಮೇಲೆ ಅಮ್ಮ ಅಜ್ಜಿ ನನ್ನನ್ನು ಆ ಕಡೆ ಸುಳಿಯಲು ಬಿಡುತ್ತಿರಲಿಲ್ಲ. ‘ಬರುವಾಗಲೇ ಕುಡಿದು ಬರುತ್ತಾನೆ, ಮಾರೀಚ – ಬಿದ್ದಿರಲಿ ಬಿಡು’ ಎಂದು ಅಜ್ಜಿ ಗೊಣಗುತ್ತಿದ್ದರು. ಆದರೆ, ಬೆಳಗಾದಾಗ ಸ್ನಾನ ಮಾಡಿ, ತಲೆ ಬಾಚಿ, ಗಂಧ ಹಚ್ಚಿ ನಮ್ಮ ಮುಂದೆ ಬರುವ ಶುಚಿರ್ಭೂತ ವೇಲಾಯುಧ ಮತ್ತೆ ಸರ್ವಸಮ್ಮತನಾಗಿರುತ್ತಿದ್ದ!

ಒಂದು ಸಂಜೆ ತೀರ ಸುಸ್ತಾದಂತೆ ಕಾಣಿಸುತ್ತಿದ್ದ ವೇಲು ಬಹಳ ಬೇಗನೆ ದೀಪವಾರಿಸಿ ಮಲಗಿಕೊಂಡ. ಸ್ವಲ್ಪ ಹೊತ್ತಿಗೆ ಸಣ್ಣದಾಗಿ ನರಳುವ ಶಬ್ದ ಕೇಳಿ ಅಪ್ಪನಿಗೆ ಹೇಳಿದೆ. ‘ನಿನಗೆ ಬೇರೆ ಕೆಲಸವಿಲ್ವಾ? ಚೆನ್ನಾಗಿ ಕುಡಿದಿರಬೇಕು’ ಎಂದು ಬಾಗಿಲು ಹಾಕಿ ಎಲ್ಲರೂ ಮಲಗಿದರೂ ನನ್ನೊಳಗೆ ಸಣ್ಣಗೆ ಕದಲುವ ತಳಮಳವಿತ್ತು. ಬೆಳಗಾದೊಡನೆ ಎದ್ದು ಸೀದಾ ಹೊರಗೆ ಅವನ ರೂಮಿಗೆ